Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 186] ಬುಧವಾರ 18—4—45 [3 ಪೈ

ಸಂಸ್ಥಾನದ ಸುದ್ದಿಗಳು

ಈಚೆಗೆ ಚೀಲೂರಿನಲ್ಲಿ ಮಳೆ ಬಂದಾಗ ಬಿದ್ದ ಒಂದು ಆನೆಕಲ್ಲು 35 ಅಡಿ ಆಳ್ದಳತೆಯುದಾಗಿದ್ದಿತೆಂದು ತಿಳಿಯಬಂದಿದೆ.

ರಾಜಮಂತ್ರ ಪ್ರವೀಣ ಶ್ರೀ ಎ. ವಿ. ರಾಮನಾಥನ್ನರು ಭರತಪುರದ ದಿವಾನಗಿರಿಗೆ ರಾಜೀನಾಮೆ ಕೊಟ್ಟಿರೆಂದು ವದಂತಿ ಹಬ್ಬಿದೆ.

ಬೆಂಗಳೂರಿನ ಬೊಂಬೂ ಬಜಾರಿನ ಪರಿಹಾರಕ್ಕೆ ಅಲ್ಲಿನ ಪೌರಸಭೆಯವರು ರೂ 5000 ದಾನ ಮಾಡಿರುತ್ತಾರೆ.

ಮೈಸೂರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರ ಚುನಾವಣೆಯು ಜೂನ್ 21 ರಲ್ಲೂ, ಉಪಾಧ್ಯಕ್ಷರ ಚುನಾವಣೆಯು ಜೂನ್ 26 ರಲ್ಲೂ ನಡೆಯತಕ್ಕದ್ದೆಂದೂ ಸರ್ಕಾರಿ ಆಜ್ಞೆಯಾಗಿದೆ.

ಬೆಂಗಳೂರು ಮಲ್ಲೇಶ್ವರದಲ್ಲಿ ಒಂದು ಭಾರಿ ಜನರಲ್ ಆಸ್ಪತ್ರೆಯನ್ನು ಕಟ್ಟಿಸುವ ಏರ್ಪಾಡು ಮಾಡುತ್ತಿದ್ದಾರೆ.

ಮೈಸೂರು-ಕಾಂಗ್ರೆಸ್ ವರ್ಕಿಂಗ್ ಕಮಿಟಿ ಅಧಿವೇಶನವು ಮೇ 12 ಮತ್ತು 13 ಕ್ಕೆ ಮುಂದರವರಿಸಲಾಗಿದೆ-

ಶ್ರೀ ಎಂ. ಎನ್. ಆನಂದಾಳ್ವಾರ್‌ನ್ನು 1-6-45 ರಿಂದ ನಡೆಯುವ ಪ್ರ. ಪ್ರ. ಸಭೆಯ ಏರ್ಪಾಡುಗಳನ್ನು ನಡೆಸಲು ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ಹಾಸನದಲ್ಲಿ ಈ ತಿಂಗಳು 25—26 ರಲ್ಲಿ ಸಂಸ್ಥಾನಾಮಳೆ ಜಿಲ್ಲಾ ಬೋರ್ಡು ಅಧ್ಯಕ್ಷ ಉಪಾಧ್ಯಕ್ಷರುಗಳ ಸಮ್ಮೇಳನವು ನಡೆಯುವುದು.

ಮೈಸೂರು ನಗರದ ಜೈನ ಸಂಘದವರು ಈ ತಿಂಗಳು ತಾ || 25 ರಲ್ಲಿ ಟೌನ್ ಹಾಲಿನಲ್ಲಿ ಶ್ರೀ ಮಹಾವೀರ ಜಯಂತಿಯನ್ನು ಈಗ ಮೈಸೂರಿನಲ್ಲಿರುವ ಜೈನ ಗುರು ಗಣೇಶಲಾಲ್‌ಜಿಯವರ ಸಮ್ಮುಖದಲ್ಲಿ, ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆಸುವರೆಂದು ಸಂಘದ ಪ್ರೆಸಿಡೆಂಟರು ತಿಳಿಸುತ್ತಾರೆ.

Stop Press

ಜರ್ಮನಿ ಇಬ್ಭಾಗವಾಗಿದೆ. ಜರ್ಮನಿ ಮುಂದುಗಾರಿಕೆ ನಿಂತಹಾಗೆಯೇ? ಬರ್ಲಿಗೆ 28 ಮೈಲಿಯಲ್ಲಿ ರಷ್ಯ ಸೇನೆ ಬಂದಿದೆ.

ನಾಜೀ ರಾಯಭಾರಿ ಹಾಲೆಂಡಿಗೆ ಓಡಿಹೋದನು.

ದಕ್ಷಿಣಯಲ್ಲಿ 48 ನಿಮಿಷಗಳಲ್ಲಿ ಪತನ ಕಟ್ಟಿ ಮುಗಿಸುತ್ತಿರುವರು!

ರೂಸ್ವೆಲ್ಟರ ಲಿಮಿಲು ಹೊರಪಟ್ಟಿದ್ದಿ ಹೆಂಡತಿಯು ತನಗೆ ಬೇಕಾದಷ್ಟನ್ನು ತಾ ಇರುವ ತನಕ ಅನುಭವಿಸಬಹುದು. ಮಕ್ಕಳಿಗೆ ಒಬ್ಬೊಬ್ಬರಿಗೆ 5 ರಲ್ಲಿ 1 ಭಾಗ.

ಜರ್ಮನ್ ರಾಜಧಾನಿ ಬದಲಾವಣೆ

ಹಿಟ್ಲರ್ ತನ್ನ ರಾಜಧಾನಿಯನ್ನು ಇನ್ಸ್‌ಬ್ರುಕ್‌ಗೆ ಬದಲಾಯಿಸಿರುವನು

ಹಿಟ್ಲರ್ ಸೈತಾನ್

ಅಮಿತ ರಾಜ್ಯಗಳ ಆಕಾಂಕ್ಷೆಯಿಂದ ಅವರಿಸಲ್ಪಟ್ಟು ಕುಯುಕ್ತಿಯಿಂದ ಕೂಡಿದವನಾಗಿ, ವಿಧವೆಯಾದ ಜಪಾನಿನ ಸಹಾಯವು ದೊರೆಯಿತೆಂದು ವಿಜೃಂಭಿಸಿ, ಫಿರಂಗಿಯನ್ನು ಹಾರಿಸಿದೆ. ನನ್ನ ಮಾತಿಗೆ ಎದುರು ಹೇಳುವವರು ಯಾರೂ ಇಲ್ಲವೆಂದು ಗರ್ವಪಟ್ಟು ಅಪಕೀರ್ತಿಯ ಪಾಲಾದೆ. ಅಮೇರಿಕಾ, ಬ್ರಿಟ್ಸ್, ರಷ್ಯಾಗಳನ್ನು ಎದುರಿಸಿ ಗಂಗೆಯಲ್ಲಿ ಕಲೆಯಲು ಎಳೆಸಿರುವೆ. ನಿನ್ನಿಂದ ಯೂರೋಪಿನ ಅನೇಕ ಸಣ್ಣ ರಾಜ್ಯಗಳು ಕಂಗೆಟ್ಟು ಕಾಡುವಾಲಾದವು, ಹಿಟ್ಲರನೇ ! ನೀನು ಸೈತಾನನಂತೆ ಅವತಾರವೆತ್ತಿರುವೆಯಲ್ಲೋ !

ಫಲಭರಿತವಾದ, ಅನ್ನವಸ್ತ್ರಗಳಿಗೆ ಕೊರತೆಯಿಲ್ಲದ ಭಾರತ ದೇಶವೂ ನಿನ್ನಿಂದ ಕಷ್ಟಗಳ ಪಾಲಾಗಬೇಕಾಗಿ ಬಂದಿತು. ಸ್ವೇಚ್ಛೆಯೆಂಬ ನೆ ಸಂತೋಷದಿಂದ ಜೀವನವನ್ನು ಮಾಡುತ್ತಿದ್ದ ಪಶ್ಚಾ ದೇಶವು ಮಹಾರಣರಂಗವಾಯಿತು. ಜಪಾನೀಯರು ಯುದ್ಧದಲ್ಲಿ ಹೋರಾಡುವ ವೀರಾಧಿವೀರರಾದರು. ನೀತಿದೂರರಾದ ಜರ್ಮನರು ಮರಣಹೋಮದಲ್ಲಿ ಶಸ್ತರಾಗುತ್ತಿರುವರು. ಜರ್ಮನೀ ರಾಜ್ಯವನ್ನೆಲ್ಲಾ ನಾಶಗೊಳಿಸಿ, ಜನಗಳಿಗೆ ಅನ್ನವಿಲ್ಲದಂತೆ ಮಾಡಿ ಸುಟ್ಟು ಸಾಯಿಸಿದ ಮಹಾಭೂತ ಕೂಪನೇ, ಕಠೋರ ಹೃದಯನೇ, ನಿಕೃಷ್ಟನೇ !

ಹಸೀ ಕಳ್ಳನಂತೆ ನಿನ್ನನ್ನು ಅನುಸರಿಸಿರುವ ಮುಸೋಲನಿಯು ನಿನ್ನ ಬೋಳು ತಲೆಯ ಮೇಲೆ ಮುಸುಕನ್ನು ಹಾಕುವನು. ಪ್ರಬಲನಾದ ಸ್ಟಾಲಿನ್ ನಿನ್ನ ಪಕ್ಕೆಗಳಿಗೆ ತಿವಿದು ಎಲ್ಲವನ್ನೂ ' ಗುಟಕಾಯು ಸ್ವಾಹಾ ' ಮಾಡುವನು- ಪ್ರಮುಖರಾದ ಅಮೇರಿಕನ್ನರ ಸಹಾಯದಿಂದ ಚರ್ಚಿಲ್ ನಿನ್ನ ಬೆನ್ನಿನ ಮೇಲೆ ಏಟು ಕೊಡುವನು. ನೀನು ನಂಬಿದ ಫಾಸಿಸ್ಟ್ ವಂಗಣ್ಣರು ಒಟ್ಟಿಗೆ ಕಲೆತು ನಿನ್ನನ್ನು ಗೂಳಿಯಲ್ಲಿ ಹೂತುಹಾಕುವರು. ನಿನ್ನನ್ನು ಸಾಯಿಸದೆ ಬಿಡುವುದಿಲ್ಲ. ಆಗ ನಿನ್ನ ವ್ಯಥೆಗಳೆಲ್ಲಾ ದೂರವಾಗುವುವು. ಇನ್ನು ಮುಂದೆ ನಿನ್ನ ಕುತಂತ್ರಗಳೂ, ರಾಕ್ಷಸ ಕೃತ್ಯಗಳೂ ಮುಂಬರಿಯಲಾರವು. ಹೆಚ್ಚು ಬುದ್ಧಿ ಖರ್ಚು ಮಾಡದೆ ಈಗಲಾದರೂ ಬ್ರಿಟಿಷರ ಶರಣಹೊಕ್ಕು ಉದ್ಧಾರನಾಗು ನೀಚನೇ !

ಜನ್ಮಭೂಮಿ ಪತ್ರಿಕೆ

ಬೆಜವಾಡಾದಲ್ಲಿ ಶೀಘ್ರದಲ್ಲಿಯೇ ಜನ್ಮಭೂಮಿ ಎಂಬ ತೆಲಗು ದಿನ ಪತ್ರಿಕೆಯು ಶ್ರೀ ಮುಜೇರಿಯಾ ಕೃಷ್ಣಮೂರ್ತಿಯವರ ಸಂಪಾದಕತ್ವದಲ್ಲಿ ಪ್ರಕಟಿಸಲ್ಪಡವುದೆಂದು ತಿಳಿಯಬಂದಿದೆ.

ನೋಟುಗಳ ಬೆಲೆ

ಜಪಾನ್ ನೋಟುಗಳನ್ನು ಚೀನಾದಲ್ಲಿ ಕಸಕ್ಕಿಂತ ಕಮ್ಮಿಯಾಗಿ ನೋಡುವರು, ಒಂದು ಅಕ್ಕೀ ಕಾಳಿಗೆ 2 ಜಪಾನ್ ಡಾಲರ್.

ಮಿತ್ರರ ಸಾಹಸ

ಈಗ ಮಿತ್ರರು ಆಕ್ರಮಿಸಿರುವ ಜರ್ಮನ್ ರಾಜ್ಯಗಳಲ್ಲಿ ಬಾಲಕರ ಪುಸ್ತಕಗಳನ್ನು ಮುದ್ರಿಸಿ, ಪಾಠಹೇಳುತ್ತಿರುವರು. ಇದುವರೆಗೆ ಜರ್ಮನಿಯ ಪುಸ್ತಕಗಳಲ್ಲಿ ಲಿಖಿತವಾದ ಪಾಠಗಳನ್ನು ಸಹಾ ನಾಜೀ ರೀತಿಯಲ್ಲೇ ಹೇಳಿಕೊಡುತ್ತಿದ್ದರಂತೆ.

ಗೋಧಿ ರವಾನೆಯಿಲ್ಲ

ಯುದ್ಧಾನಂತರ ಭಾರತಕ್ಕೆ ಆಸ್ಟ್ರೇಲಿಯಾ ಗೋಧಿಯು ಸರಬರಾಜಾಗುವುದೆಂದು ಎಲ್ಲಾ ಯೂರೋಪಿಗೆ ರವಾನೆಯಾಗುತ್ತೆ.

ಫ್ರಿಸ್ಕೋ ಸಮ್ಮೇಳನ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಕಾಗದಪತ್ರಗಳೆಲ್ಲಾ ಇಂಗ್ಲೀಷು, ಫ್ರೆಂಚು ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಬರೆಯಲಾಗುವುದು.

ಅಪ್ಪಣೆ ದೊರೆತಿಲ್ಲ

ಭಾರತೀಯ 3 ಮಂದಿ ಸಂಪಾದಕರನ್ನು ಸ್ಯಾನ್‌ಫ್ರಾನ್ಸಿಸ್ಕೋಗೆ ಕಳುಹಿಸಲಾಗುವುದಿಲ್ಲವೆಂದು ಸರಕಾರದವರು ತಿಳಿಸಿದ್ದಾರೆ.

ಕಟ್ಟಾಜ್ಞೆ

ಜರ್ಮನಿಯ ನ್ಯೂರೆಂಬರ್ಗ್ ನಗರ ಅಮೇರಿಕನ್ನರ ವಶವಾಯಿತು. ದಿನಕ್ಕೆ 45 ಸಾವಿರ ಮಂದಿಯಂತೆ ಜರ್ಮನರು ಶರಣಾಗತರಾಗುತ್ತಿರುವರು. ಪೂರ್ವದಿಕ್ಕಿನಿಂದ ಆಪಾಯು ಹೆಚ್ಚುತ್ತಿದೆಯೆಂದು ಹಿಟ್ಲರ್ ಹೇಳಿಕೆ ಕೊಟ್ಟಿರುವನು. ಬರ್ಲಿನ್ ಪತನವಾದನಂತರ ಮಿತ್ರರು ಜರ್ಮನಿಗೆ ಒಂದು ಕಟ್ಟಕಡೆ ಆಜ್ಞೆಯನ್ನು ಕೊಟ್ಟು ಆಗ ಜರ್ಮನರೆಲ್ಲಾ ಶರಣಾಗಬೇಕು ತಪ್ಪಿದಲ್ಲಿ ಸಿಕ್ಕಿದ ಕಡೆ ಕೊಚ್ಚಿ ಬಲ್ಲಪ್ಪಡುವರೆಂದು ಹೇಳಲಾಗಿದೆ.

ಪೋಲೀಸ್ ಕಾನ್ಸ್ಟೆಬಲಿನ ವಿಚಿತ್ರ ವರ್ತನೆ.

ಮುಸ್ತರ್ಖಾನ್ ಎಂಬ ಮಾಜಿ ಪೋಲೀಸ್ ಕಾನ್ಸ್ಟೆಬಲು ಟ್ರಿಂಕಾಸಿಯಿಂದ ರೈಲು ಹೊರಟಕೂಡಲೇ ಸ್ಟೇಷನ್ ಕೈಕಂಬ ತಲಪುದರೊಳಗಾಗಿ ಸರಪಣಿ ಎಳೆದನು. ಗಾಡಿ ನಿಂತಿತು. ರೈಲ್ವೆ ಪೋಲೀಸಿನವರು ಇವನನ್ನು ಪತ್ತೆಹಚ್ಚಿ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ, ವಿಚಾರಿಸಿದಲ್ಲಿ — ತಾನೊಬ್ಬ ಪೋಲೀಸ್ ಕಾನ್ಸ್ಟೆಬಲು, ತನಗೆ ವರ್ಗ ಮಾಡಿದರು ತಾನು ಹೋಗಲಿಲ್ಲವಾಗಿ ಕೆಲಸದಿಂದ ವಜಾಮಾಡಿದರು ; ತಾನು ಇನ್‌ಸ್ಪೆಕ್ಟರ್, ಸೂಪರೆಂಟ್, ಇನ್‌ಸ್ಪೆಕ್ಟರ್ ಜನರಲ್, ಗವರ್ನರ್, ವೈಸರಾಯ್, ಇವರಿಗೆ ಅರ್ಜಿಕೊಟ್ಟು ನೊಖ್ತಾ ನೋಡಿದರೂ ಪ್ರಯೋಜನವಾಗಲಿಲ್ಲ, ತನಗೆ ನ್ಯಾಯ ದೊರೆಯಲಿಲ್ಲ ; ಆದಕ್ಕಾಗಿ ಅಧಿಕಾರಿಗಳ ಗಮನಕ್ಕೆ ಬರಲೆಂದು ಹೀಗೆ ಮಾಡಿರುತ್ತೇನೆ. ವೈಸರಾಯರ ಮುಂದೆ ತನ್ನ ದೂರನ್ನು ಹೇಳಲು ಬಹಳ ಖರ್ಚಿನಿಂದ ದೆಹಲಿಗೆ ಹೋದೆ. ಪ್ರಯೋಜನವಾಗಲಿಲ್ಲ. ವೈಸರಾಯಿ ಭವನದ ಮುಂದೆ ಸತ್ಯಾಗ್ರಹ ಮಾಡಿದೆ ಪ್ರೈವೆಟ್ ಸೆಕ್ರೆಟರಿಯವರು ತನ್ನ ಕಷ್ಟ ಪರಿಹಾರ ಮಾಡುತ್ತೇವೆಂದು ಭರವಸೆ ಕೊಟ್ಟರು ಎಂದು ಹೇಳಿದನು. ಇವನ ಹೆಸರು ವಿಳಾಸಗಳನ್ನು ಬರೆದುಕೊಂಡು ಇವನನ್ನು ಬಿಟ್ಟುಬಿಟ್ಟ ; ಮೂರನೇ ದಿವಸ ತಾಲ್ಲೋಕು ಆಫೀಸಿಗೆ ಮುಂದೆ ಸಿಂತು ಗದ್ದಲ ಮಾಡುತ್ತಾ ಅಧಿಕಾರಿಗಳನ್ನು ಮನಸ್ಸಿ ಬೈದನು. ಪೋಲೀಸಿನವರು ಎಷ್ಟು ಹೇಳಿದರೂ ಕೇಳಲಿಲ್ಲವಾಗಿ ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅಲ್ಲಿಯೂ ತನ್ನನ್ನು ಹಿಡಿದಿರುವ ಸೆಕ್ಷನ್ ತಕ್ಷೀರಗೆ ಜಾಮೀನಿನ ಮೇಲೆ ಬಿಡತಕ್ಕದ್ದೆಂದೂ, ಕನ್ನಸ್ಸು ಜಾಮೀನಿನ ಮೇಲೆ ಬಿಡಬೇಕೆಂದೂ ವಾದಿಸಿದನು. ಆದರೆ ಮ್ಯಾಜಿಸ್ಟ್ರೇಟರು ಜಾಮೀನಿನ ಮೇಲೆ ಬಿಡಲಿಲ್ಲ. ಈ ವಿಷಯವು ಹೇಗೆ ಪರ್ಯವಸಾನವಾಗುವುದೋ ಮುಂದೆ ನೋಡಬೇಕು.



ಐ.ಜೆ. ಹಾಲ್, ಸರಾಫ್ ಕಟ್ಟೆಯ ಬಳಿ
ರಸ್ತೆ ಬೀದಿ, ಮೈಸೂರು

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ

5 ನೇ ಅಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್

ಜೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore

For Good Printing—

L. N. Press

Sriramp st MYSORE

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ ಗಂಟಿ ಚಾಮರಾಜಪುರಂ ಮೈಸೂರು

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

AT OPERA — From 12-4-45

POOMPAVAI

'ಪೂಂಪಾವೈ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣ್



ಬ್ರಿಟಿಷರ 8 ನೇ ಭೂ ಸೈನ್ಯದ ವಾಹನಗಳು ಇಟಲಿಯ ಬಿಟ್ಟವಲ್ಲಿ ಹೋಗುತ್ತಿರುವುವು. ಈ ಚಿತ್ರದಲ್ಲಿ ಸೇನಿಕರು ಏಶ್ರಾಂತಿ ತೆಗೆದು ಕೊಂಡು ಮುತ್ತಿ ಕಾರ್ಯಾಚರಣೆಗೆ ಹೋಗುತ್ತಿರುವುದನ್ನು ಸಹ ಕಾಣಬಹುದು.